International Journal of Kannada Research 2020; 6(1): 39-42

International Journal of Kannada Research
www.kannadajournal.com

**ISSN: 2454–5813**
IJKR 2020; 6(1): 39-42
© 2020 IJKR
www.kannadajournal.com
Received: 25-11-2019
Accepted: 27-12-2019

**ಮಂಜು.ಜೆ**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ವಿದ್ಯಾವರ್ಧಕ ಪ್ರಥಮ ದರ್ಜೆ
ಕಾಲೇಜು ಮೈಸೂರು

**Corresponding Author:**
**ಮಂಜು.ಜೆ**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ವಿದ್ಯಾವರ್ಧಕ ಪ್ರಥಮ ದರ್ಜೆ
ಕಾಲೇಜು ಮೈಸೂರು

# ಕನ್ನಡ ಸಾಹಿತ್ಯದಲ್ಲಿ ಜನಪದ ಹಾಡುಗಳ ಮಹತ್ವ ಮತ್ತು ಅಗತ್ಯತೆ

**ಮಂಜು.ಜೆ**

ಭಾರತ ಹಲವು ಸಂಸ್ಕೃತಿಗಳ ನಾಡು. ಸಾಮಾನ್ಯವಾಗಿ ಸಂಸ್ಕೃತಿಯನ್ನು ಜನಪದ ಸಂಸ್ಕೃತಿ, ಶಿಷ್ಟ ಸಂಸ್ಕೃತಿ ಎಂದು ಎರಡು ಅಂಗಗಳಲ್ಲಿ ಗುರುತಿಸಲಾಗುತ್ತದೆ. ಮಾನವನ ಸಮಗ್ರ ಸಂಸ್ಕೃತಿಯನ್ನು ಅಧ್ಯಯನ ಮಾಡಿದರೆ ಜಾನಪದ ಪರಂಪರಾಗತ ವಿಷಯಗಳನ್ನು ಪ್ರತ್ಯೇಕಿಸಿಕೊಂಡು ತನ್ನ ಅಧ್ಯಾಯದ ವ್ಯಾಪ್ತಿಗೆ ಒಳಪಡಿಸಿಕೊಳ್ಳುತ್ತದೆ. ಸಹಸ್ರಾರೂ ವರ್ಷಗಳ ಮಾನವ ಜೀವನ ಯಾತ್ರೆಯಲ್ಲಿ ಒಂದು ಕಾಲಕ್ಕೆ ಜೀವನದ ಸಮಸ್ತ ವ್ಯಾಪಾರವೂ ಕಂಠಸ್ಥ ಸಂಸ್ಕೃತಿಯ ಮೂಲಕವೇ ತಲೆಮಾರಿನಿಂದ ತಲೆಮಾರಿಗೆ ಸಾಗಿಬರುತ್ತಿತ್ತು. ಕಂಠಸ್ಥ ಸಂಸ್ಕೃತಿ ಶಿಷ್ಟ ಸಂಸ್ಕೃತಿಯ ಉದಯದಿಂದ ಮುಕ್ಕಾಗಾಲಿಲ್ಲ ತನ್ನ ಪರಿಸರದಲ್ಲಿ ಉಳಿದುಕೊಂಡೆ ಬಂದಿತ್ತು. ಇದನ್ನೇ ವಿದ್ವಾಂಸರು 'ಜಾನಪದ' ಎಂದು ಕರೆದರು. ಇದನ್ನೇ ಇಂಗ್ಲೀಷಿನಲ್ಲಿ ನಾವು 'ಈಂಟಇಟಂಡಿಜ' ಎಂದು ಕರೆಯುತ್ತೇವೆ. "ಜೀವನದ ರೀತಿನೀತಿಗಳು, ಆಚಾರ ವಿಚಾರಗಳು, ಸಂಪ್ರದಾಯ, ನಂಬಿಕೆಗಳು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಸಾಗಿಬರುತ್ತದೆ"– ಈ ರೀತಿ ನಾವು ಜನಪದವನ್ನು ವಿವರಿಸಬಹುದು. ಶಿಷ್ಟ ಸಾಹಿತ್ಯದಷ್ಟೇ ಅತ್ಯಂತ ಪ್ರಮುಖವಾದುದು ಜನಪದ ಸಾಹಿತ್ಯ ಒಂದು ಕಾಲಕ್ಕೆ ಶಿಷ್ಟರ ಅವಗಣನೆಗೆ ತುತ್ತಾಗಿದ್ದ ಜನಪದ ಸಾಹಿತ್ಯ ತನ್ನ ಸರಳತೆ, ಮುಗ್ಧತೆ, ಕಾವ್ಯಾಂಶಗಳಿಂದ ಕೂಡಿ ಜನಮಾನಸವನ್ನು ಸೂರೆಗೊಂಡಿರುವುದು ಇದರ ಶ್ರೇಷ್ಠತೆಗೆ ಕಾರಣವಾಗಿದೆ. ಹೇಳಬೇಕಾದ್ದನ್ನು ನೇರವಾಗಿ ನಿಷ್ಠುರವಾಗಿ ಸರಳವಾಗಿ ಮನೋಹರವಾಗಿ ಹೇಳಿಬಿಡುವ ಒಂದು ದೊಡ್ಡ ಲಕ್ಷಣ ಜನಪದ ಸಾಹಿತ್ಯಕ್ಕಿದೆ. ಆನಪದ ಹಾಡುಗಳಲ್ಲಿ ಮಣ್ಣಿನ ವಾಸನೆಯಿದೆ.

ಈ ಲೇಖನದಲ್ಲಿ ನಾನು ಚರ್ಚಿಸಲು ಹೊರಟಿರುವ ವಿಚಾರ ಜನಪದರು ಮತ್ತು ಜನಪದ ಹಾಡುಗಳನ್ನು ಕುರಿತ ಮಹತ್ವವನ್ನು ತಿಳಿಸಿಕೊಡುವುದು. ಜನಪದ ಸಾಹಿತ್ಯದಲ್ಲಿ ಹಲವು ಪ್ರಕಾರಗಳನ್ನು ನಾವು ಕಾಣಬಹುದಾಗಿದೆ. ಜನಪದ ಕಥೆಗಳು, ಜನಪದ ಹಾಡುಗಳು, ಜನಪದ ಅಡುಗೆಗಳು, ಜನಪದ ಉಡುಗೆಗಳು, ಜನಪದ ನಂಬಿಕೆಗಳು, ಜನಪದ ಸಂಪ್ರದಾಯಗಳು, ಜನಪದ ಗಾದೆಗಳು, ಜನಪದ ಒಗಟುಗಳು, ಒಡಪುಗಳು, ಜನಪದ ಕಲೆಗಳು, ಜನಪದ ವೈದ್ಯ, ಜನಪದ ರಂಗಭೂಮಿ ಹೀಗೆ ಹಲವು ಪ್ರಕಾರಗಳಿವೆ.

ಜನಪದ ಹಾಡುಗಳಲ್ಲಿ ಬೀಸುವ ಪದಗಳು, ಕುಟ್ಟುವ ಪದಗಳು, ನಾಟಿಯ ಪದಗಳು, ಲಾಲಿಯ ಪದಗಳು, ಸಂಪ್ರದಾಯದ ಪದಗಳು, ಆಚರಣೆಯ ಪದಗಳು, ಮದುವೆ ಮತ್ತು ಒಸಗೆ ಪದಗಳು, ಡೊಳ್ಳಿನ ಪದಗಳು, ಕಥನಗೀತೆ, ಮಹಾಕಾವ್ಯ ಹೀಗೆ ಹಲವು ಪದಗಳನ್ನು ಕಾಣಬಹುದು. ಇಂದು ನಮ್ಮ ನಡುವೆ ಮೂಲ ಮಟ್ಟುಗಳಲ್ಲಿ ಜನಪದ ಗೀತೆಗಳನ್ನು ಹಾಡುವ ಕೇಳುವ ಮನಸ್ಸುಗಳು ಕಡಿಮೆಯಾಗುತ್ತಿವೆ. ಅದರಲ್ಲೂ ನಮ್ಮ ಯುವ ಜನಾಂಗ ನಮ್ಮ ಜನಪದದ ಬಗೆಗೆ ಆಸಕ್ತಿ ತೋರುತ್ತಿಲ್ಲ. ಅವರಿಗೆ ಜನಪದದ ಬಗೆಗೆ ತಿಳಿಸಿಕೊಡುವ ಅಗತ್ಯತೆ ಅನಿವಾರ್ಯತೆ ಇಂದು ಇದೆ. ಆಧುನಿಕ ಸಂಸ್ಕೃತಿಯ ಪ್ರಭಾವದಿಂದಾಗಿ ಅವರು ಒಂಟಿಯಾಗುತ್ತಿದ್ದಾರೆ. ಏಕಾಂಗಿತನದೆಡೆಗೆ ಸಾಗುತ್ತಿದ್ದಾರೆ. ಇಂತಹ ಮನಸುಗಳನ್ನು ಮತ್ತೆ ಒಂದುಗೂಡಿಸುವ ಬೆರೆಯುವಂತೆ ಮಾಡುವ ಪರಸ್ಪರ ಕೂಡಿ ಸಹಬಾಳ್ವೆ ನಡೆಸುವ ಹಾಗೆ ಮಾಡಬೇಕಾದುದು ನಮ್ಮ ಕರ್ತವ್ಯವಾಗಿದೆ. ಜನಪದ ಹಾಡುಗಳು ಈ ಕೆಲಸವನ್ನು ಮಾಡಬಲ್ಲವು. ಈ ಹಾಡುಗಳ ಅಗತ್ಯ ಇಂದು ನಮಗೆ ಇದೆ. ಮಾನವ ಪದಗಳನ್ನು ಹಾಡುವುದನ್ನು ಕಲಿತಾಗಿನಿಂದಲೇ ಭೂಮಿತಾಯಿಯನ್ನು ದೇವರೆಂದು ನೆನೆಯುತ್ತಾ ಜನಪದ ಹಾಡುಗಳನ್ನು ಕಟ್ಟಿ ಹಾಡಲು ಪ್ರಾರಂಭಿಸಿದನು. ಬೆಳಗಿನ ಏಳುವಿಕೆಯಿಂದ ಜೀವನವನ್ನು ಪ್ರಾರಂಭಿಸುವ ನಮ್ಮ ಜನಪದರು ಧಾನ್ಯಗಳನ್ನು ಬೀಸುತ್ತಾ ಈ ಬೀಸುವ ಪದದ ಮೂಲಕ ದಿನವನ್ನು ಪ್ರಾರಂಭಿಸುತ್ತಾರೆ.

ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಾಲಿ
ಎಳ್ಳು ಜೀರಿಗೆ ಬೆಳಿಯೊಳ–ಭೂಮಿತಾಯ
ಎದ್ದೊಂದು ಗಳಿಗೆ ನೆನೆದೇನು

ಈ ತ್ರಿಪದಿಯನ್ನು ಜನಪದ ಗಾಯಿತ್ರಿಮಂತ್ರ ಎಂದು ಕರೆಯುತ್ತಾರೆ. ಜನಪದರು ಶ್ರಮಜೀವಿಗಳು ಬೆಳಗಿನಿಂದ ಸಂಜೆಯವರೆಗೆ ಯಾವುದಾದರೊಂದು ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುತ್ತಾರೆ. ಶ್ರಮ ಪರಿಹಾರಕ್ಕಾಗಿ ತಾವು ಕಂಡುಕೊಂಡಿರುವ ಉಪಾಯವೇ ಹಾಡುಗಳು ಭತ್ತವನ್ನು ಕುಟ್ಟುವಾಗ ಈ ಹಾಡನ್ನು ಹಾಡುತ್ತಾರೆ.

ಬಿದಿರು ಬೆಟ್ಟದ ಮೇಲೆ ಚದುರಂಗದೊಳುಕಲ್ಲು
ಚದುರೇರು ಚಿನ್ನಾದ ಬಳೆಯಿರುವ ಬನಕೇಲಿ
ಪದ ಹಾಡಿ ಅಕ್ಕಿ ತೊಳಿಸ್ಯಾರೆ
ಚಂದಾದ ಒನಕೆಗೆ ಗಂದದೊಡವನಿಕ್ಕ
ಆಡಿ ಕುಟ್ಟಿದರೆ ಧಣಿರೆಂದೊ
ಆಡಿ ಕುಟ್ಟಿದರೆ ಧಣಿರೆಂದೊನಕೆಯ
ಮಾಡಿದ ಬಡಗಿ ಸುಖಿಬಾಳೊ

ಕನ್ನಡ ನಾಡಿನ ಬಹುತೇಕ ಗ್ರಾಮಗಳಲ್ಲಿ ಈಗಲೂ ರಾಗಿಯ ಕಲ್ಲು, ಒನಕೆ, ಮೊರ ಮನೆಯ ದಿನನಿತ್ಯದ ಬಳಕೆಯ ವಸ್ತುಗಳಾಗಿವೆ. ಬೀಸುವ ಪದಗಳನ್ನು ಇಬ್ಬರು ಅಥವಾ ಮೂವರೂ ಸೇರಿಕೊಂಡು ಹಾಡುತ್ತಾ ತಮ್ಮ ಕೆಲಸದಲ್ಲಿ ಮಗ್ನರಾಗಿರುತ್ತಾರೆ. ಬೀಸುವ ಪದ ಸಾಮಾನ್ಯವಾಗಿ ತ್ರಿಪದಿಯಿಂದ ಕೂಡಿರುತ್ತದೆ. ಕುಟ್ಟುವ ಪದಗಳು ಮನೆಯ ಗೃಹಿಣಿಯಾದವಳು ಒನಕೆಯನ್ನು ಹಿಡಿದು ಜೊತೆಗೊಬ್ಬರು ಹಿಡಿದು ಕುಟ್ಟುವಾಗ ಒನಕೆಯ ಗತಿಗೆ ತಕ್ಕಂತೆ ಉಸಿರು ಬಿಡುವ ಎಳೆಯುವ ಕ್ರಮಕ್ಕೆ ಸರಿಯಾಗಿ ಹಾಡನ್ನು ಅಳವಡಿಸಿಕೊಳ್ಳುತ್ತಾರೆ. ಇತ್ತೀಚೆಗೆ ಯಾಂತ್ರಿಕರಣದಿಂದಾಗಿ ಈ ರೀತಿಯ ಕಾಯಕಗಳು ಕಡಿಮೆಯಾಗುತ್ತಿವೆ. ಆದರೂ ಕರ್ನಾಟಕದ ಹಲವು ಕಡೆಗಳಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಹಾಡುಗಳು ಇಂದಿಗೂ ಉಳಿದು ಬೆಳೆದುಕೊಂಡು ಬರುತ್ತಿವೆ.

ಹೊಲಗದ್ದೆಗಳಲ್ಲಿ ನಾಟಿ ಮಾಡುವಾಗ ಹೆಂಗಸರು ಹಾಡುವ ಪದಗಳನ್ನು ನಾಟಿಯ ಪದಗಳು ಎಂದು ಕರೆಯುತ್ತಾರೆ.

ಒಂದಾನೊಂದು ಊರಿನಲ್ಲಿ ಸುವ್ವಿಲಾಲಿ
ಒಬ್ಬನೊಬ್ಬ ರಾಜನಿದ್ದ ಸುವ್ವಿಲಾಲಿ
ಅವನ್ಗೆ ಏಳು ಜನ ಹೆಂಡತಿರು ಸುವ್ವಿಲಾಲಿ
ಆದರೂ ಕೂಡ ಮಕ್ಕಳಿಲ್ಲ ಸುವ್ವಿಲಾಲಿ

ಎಂದು ಹಾಡುತ್ತಾ ದೈಹಿಕ ಕ್ರಮವನ್ನು ಮರೆಯುತ್ತಾರೆ. ನಾಟಿಯ ಪದಗಳ ಸೃಷ್ಟಿ ಗ್ರಾಮೀಣ ಹೆಂಗಸರಿಂದಾದದ್ದು ಎಂದು ಅಭಿಪ್ರಾಯವಿದೆ. ನಾಟಿ ಮಾಡುವಾರೆ, ಕಳೆ ಕೀಳುವಾಗ, ಭತ್ತ, ರಾಗಿ ಕಟ್ಟಾವು ಮಾಡುವಾಗ ಒಬ್ಬಳು ಗೀತೆಯನ್ನಾಡಿದರೆ ಉಳಿದವರು ಹಿಮ್ಮೇಳವಾಗಿ ಸೊಲ್ಲನ್ನು ಹಾಡುತ್ತಾರೆ. ಈ ರೀತಿಯಾಗಿ ಇಂದಿನ ಪೀಳಿಗೆ ದೈಹಿಕ ಶ್ರಮ ಪಡಲು ಆಸಕ್ತಿ ಇರುವುದಿಲ್ಲ. ಈ ಗೀತೆಗಳು ದೈಹಿಕ ಶ್ರಮ ಮನುಷ್ಯನ ಆರೋಗ್ಯಕ್ಕೆ ಅತಿ ಅಗತ್ಯ ಎಂಬುದನ್ನು ತಿಳಿಸಿಕೊಡುತ್ತದೆ.

ಜನಪದರು ಮಕ್ಕಳನ್ನು ಮಲಗಿಸುವಾಗ ಲಾಲಿಯ ಪದಗಳನ್ನು ಹಾಡುತ್ತಾರೆ. ಕಂದನನ್ನು ತೂಗಿ ಮಲಗಿಸುವಾಗ ಲಾಲಿಯ ಪದಗಳನ್ನು ಹಾಡುತ್ತಾರೆ. ಈ ಲಾಲಿಯ ಪದಗಳು ಮಕ್ಕಳ ಮಾನಸಿಕ ಮತ್ತು ದೈಹಿಕ ವಿಕಸನಕ್ಕೆ ಬೆಳವಣಿಗೆಗೆ ಅತಿಮುಖ್ಯ.

ಯಾಕಳುವೆ ನನಕಂದ ಬೇಕಾದ್ದನಾನೀವೆ
ನಾಕೆಮ್ಮೆ ಕರೆದ ನೊರೆಹಾಲು–ಸಕ್ಕರೆ
ನೀ ಕೇಳಿದಾಗ ಕೊಡುವೇನು
ಅತ್ತರೆ ಅಳಲವ್ವ ಈ ಕೂಸು ನನಗಿರಲಿ
ಕೆಟ್ಟರೆ ಕೆಡಲಿ ಮನೆಗೆಲಸ–ಕಂದನಂಥ
ಮಕ್ಕಳಿರಲವ್ವ ಮನೆತುಂಬ

ಹೀಗೆ ಲಾಲಿಹಾಡನ್ನು ಕೇಳುತ್ತಾ ಬೆಳೆಯುವ ಮಕ್ಕಳು ಜೀವನದ ಮೌಲ್ಯಗಳನ್ನು ಕಲಿಯುತ್ತಾ ಬೆಳೆಯುತ್ತಾರೆ. ಇಂದು ಈ ನೈತಿಕ ಮೌಲ್ಯಗಳು ಕಡಿಮೆಯಾಗುತ್ತಿವೆ. ಕಾರಣ ಟಿ.ವಿ ಮತ್ತು ಮೊಬೈಲ್‌ಗಳ ಮೂಲಕ ಕೇಳುತ್ತಿರುವ ಅಸಂಬದ್ಧ ಅತಿರೇಖದ ಕೆಲವು ಸಿನಿಮಾ ಹಾಡುಗಳು ಮಕ್ಕಳ ನೈತಿಕ ಮೌಲ್ಯಗಳನ್ನು ಕಸಿಯುತ್ತಿವೆ. ಹಾಗಾಗಿ ಈ ಜನಪದ ಹಾಡುಗಳು ತೀರಾ ಅತ್ಯಗತ್ಯ.

ನಮ್ಮ ಜನಪದರಲ್ಲಿ ಆಚರಣೆಯ ಮತ್ತು ಸಂಪ್ರದಾಯದ ಹಾಡುಗಳು ಮಹತ್ವ ಪಡೆದುಕೊಂಡಿವೆ. ಆಚರಣೆಗೆ ಸಂಬಂಧಿಸಿದಂತೆ ಮುಖ್ಯವಾದ ಗೀತೆಗಳು ಕೂಂತಿ ಪೂಜೆ, ಭೂಮಿ ಪೂಜೆ, ಜೋಕುಮಾರಸ್ವಾಮಿ ಪೂಜೆ ತಿಂಗಳು ಮಾವನ ಪೂಜೆ, ರಾತ್ರಿಯ ವೇಳೆಯಲಿ ಊರಿನ ಹೆಂಗಸರು ಬಯಲುಸೀಮೆಯ ಪ್ರದೇಶವೊಂದರಲ್ಲಿ ಕುಳಿತು ನೆಲವನ್ನು ಸಾರಿಸಿ ರಂಗವಲ್ಲಿ ಬಿಟ್ಟು ಅರ್ಧಚಂದ್ರಾಕೃತಿ ಬಿಡಿಸಿ ತಿಂಗಳು ಪೂಜೆ ಮಾಡುತ್ತಾರೆ. ಹೀಗೆ ಕುಂತಿಯ ಪದಗಳು ಒಂದು ವಿಶಿಷ್ಟ ಮಾದರಿಯ ಪದಗಳು ಪಾಂಡವರು ಬೇಸಾಯದ ಆದ್ಯ ಪುರುಷರೆಂದ ಭಾವಿಸಲಾಗಿದೆ. ತನ್ನ ಮಕ್ಕಳನ್ನು ಕಟ್ಟಿಕೊಂಡು ನಾನಾ ಬಗೆಯ ಕಷ್ಟಗಳನ್ನು ಅನುಭವಿಸಿದ ಕುಂತಿದೇವಿ ಅವರೇ ಕಾಯಿಯನ್ನು ಈ ಭೂಮಿಯ ಮೇಲೆ ಬಿತ್ತಿಹೋದರು ಎಂಬುದನ್ನು ಈ ಹಾಡಿನಿಂದ ತಿಳಿಯಬಹುದು.

ಸತ್ಯವಂತ ಪಾಂಡವರು ಸತ್ತರೆಂದೆನಬೇಡಿ
ಸತ್ತರೆ ಈ ಲೋಕ ಉಳಿಯದು–ಪಾಂಡವರು
ಬಿತ್ತಿ ಹೋಗುವರೆ ಅವರೇಯ

ಎಂಬ ಹಾಡಿನಲ್ಲಿ ನಾವು ಈ ಅಂಶವನ್ನು ತಿಳಿಯಬಹುದು. "ಈ ಭೂಮಿಯ ಮೇಲೆ ಎಲ್ಲಿಯವರೆಗೂ ಸತ್ಯ, ನ್ಯಾಯ, ನಿಷ್ಠೆ, ಧರ್ಮ, ಪ್ರಾಮಾಣಿಕತೆ ಇರುವುದೋ ಅಲ್ಲಿಯವರೆಗೂ ಪಾಂಡವರು "ಅವರೆ"– ಎಂಬುದನ್ನು ತಿಳಿಸಿಕೊಡುತ್ತದೆ. ಅಂದರೆ ಅವರೆಕಾಯಿಯನ್ನು ಬಿತ್ತಿದವರು ಪಾಂಡವರು.

ಸಂಪ್ರದಾಯದ ಪದಗಳು ಮದುವೆ ಪದಗಳು, ಗಿರಿಜಾಕಲ್ಯಾಣ, ಒಸಗೆ ಪದಗಳು, ಮದುವೆಯ ಹಾಡುಗಳಲ್ಲಿ ಸೋಬಾನೆಯ ಪದಗಳು ಹಾಡಲೇಬೇಕು. ಮದುವೆಯ ಸಂದರ್ಭದಲ್ಲಿ ಯಾರೂ ಸೋಬಾನೆ ಪದಗಳನ್ನು ಹಾಡಿಸಿಕೊಳ್ಳುವುದಿಲ್ಲವೋ ಅವರಿಗೆ ಮಕ್ಕಳಾಗುವುದಿಲ್ಲ ಎಂಬ ನಂಬಿಕೆ ನಮ್ಮ ಜನಪದರಲ್ಲಿದೆ. ಇದು ಜನಪದ ಹಾಡುಗಳಿಗೆ ಎಷ್ಟು ಮಹತ್ವವಿದೆ ಎಂಬುದನ್ನು ತಿಳಿಸಿಕೊಡುತ್ತದೆ.

ಸೋ ಬನ್ನಿರೆ ಸೋಬಾನ ಬನ್ನಿರೆ
ಸೋಬಾನೆಳು ಬನ್ನಿ ಸೊಬಗಿನ್ ಮುತ್ತೈದೀರ್ಯಾ
ರಾಗ ಪಾಡೊಬನ್ನಿ ರಮಣೀರ್ಯಾ – ಮುತ್ತೈದೀರ್ಯಾ
ಓದು ತಮ್ಮಯ್ಯ ಮದುವೀಗೆ
ನೆನ್ನೆ ಇಷ್ಟೊತ್ತಲ್ಲಿ ಬಿಗುತೀಗೆ ಬಿಗುಮಾನ
ಬಿದ್ದೋಯ್ತು ತಾಳಿ ಕೊರಳೀಗೆ –ಹೆಣ್ಣೊರವ್ವ
ಹಿಡ್ಕೊಳ್ಳಿ ನಮ್ಮ ಹೊಂಗೆಬೇರ

ಎಂದು ಹಾಡುವ ಮೂಲಕ ಗಂಡಿನ ಕಡೆಯವರು ಹೆಣ್ಣಿನ ಕಡೆಯವರನ್ನು ಮತ್ತು ಹೆಣ್ಣಿನ ಕಡೆಯವರು ಗಂಡಿನ ಕಡೆಯೊರನ್ನ ಜರಿಯುತ್ತಾ ಸೋಬಾನೆ ಪದಗಳನ್ನು ಹಾಡುತ್ತಾ ಮದುವೆ ಮಾಡಿಸುತ್ತಾರೆ. ಅಲ್ಲದೆ ಹೆಣ್ಣು ಮೈ ನೆರೆದಾಗ ಶಾಸ್ತ್ರದ ಒಸಗೆ ಹಾಡುವ ಹಾಡುಗಳು, ಬಳೆಶಾಸ್ತ್ರದ ಹಾಡುಗಳು ಈವೆಲ್ಲವೂ ವೈಜ್ಞಾನಿಕವಾಗಿಯೂ ಮನುಷ್ಯನ ಬದುಕಿನ ಪ್ರಮುಖ ಘಟ್ಟಗಳು. ಹಾಗಾಗಿ ಈ ಸಂದರ್ಭಗಳಲ್ಲೆಲ್ಲಾ ಜನಪದರೂ ಹಾಡು ಕಟ್ಟಿ ಹಾಡುತ್ತಾರೆ. ಅವರು ಭಾವನಾ ಜೀವಿಗಳು ಬದುಕಿನ ಪ್ರತಿ ಘಟ್ಟದಲ್ಲೂ ಹಾಡುಗಳಿಗೆ ಮಹತ್ವ ನೀಡುವವರು.

ಜನಪದ ಗೀತಿಗಳನ್ನು ವೃತ್ತಿ ಗಾಯಕರು ಹಾಡುತ್ತಾರೆ. ವೃತ್ತಿ ಗಾಯಕರೆಂದರೆ ಕರಪಾಲದವರು, ಚೌಡಿಕೆಯವರು, ದೇವರ ಗುಡ್ಡರು, ದೊಂಬಿದಾಸರು, ನೀಲಗಾರರು ಮುಂತಾದವರು. ಇವರು ಹಾಡುವ ಹಾಡುಗಳು ಮೂಲಧಾಟಿಯ ಜನಪದ ಹಾಡುಗಳು ಜನಪದ ಹಾಡುಗಳನ್ನು ಮೂಲಧಾಟಿಯಲ್ಲೇ ಹಾಡಬೇಕು.

ಕರಪಾಲದವರೆಂದರೆ ಹಸ್ತ ಮತ್ತು ಬೆರಳುಗಳಲ್ಲಿ ವಿವಿಧ ವಿನ್ಯಾಸಗಳನ್ನು ತೋರುತ್ತಾ ಸಂಭಾಷಿಸಬಹುದಾದ ಒಂದು ರಹಸ್ಯ ಭಾಷೆ. 12ನೇ ಶತಮಾನದಲ್ಲಿ ಶರಣರು ಇದನ್ನು ಬಳಸಿಕೊಂಡಂತೆ ತಿಳಿದುಬರುತ್ತದೆ. ಬಸವ ಪುರಾಣದಿಂದ ಕನ್ನಗತ್ತಿ ಬೊಮ್ಮಯ್ಯ ಪ್ರಕರಣವನ್ನು ನಾವು ಕೇಳಬಹುದು.

ಈಶನ ವರಸುತನೆ ಮೂಷಿಕ ವಾಹನನೆ
ಕ್ಲೇಷವಿದೂರನೆ ಪೋಷಿಸುದೇವೆ
ಪೋಷಿಸುದೇವ
ದಿಕ್ ತಳಾಂಗುತಕದಿಮಿತ
ನಾವು ಬಲ್ಲವರಲ್ಲ ನಾವು ತಿಳಿದವರಲ್ಲ
ಯಾವ ತಪ್ಪಿದ್ದರು ತಿದ್ದಿಕೊಳಬೇಕು
ತಿದ್ದಿಕೊಳಬೇಕು

ಅಪ್ಪ ಮಗು ಈಗ ನಾವು ಸಹೃದಯ ಬಂಧುಗಳ ಅಪೇಕ್ಷೇಯ ಮೇರೆಗೆ ಶರಣ ಕನ್ನಗತ್ತಿ ಬೊಮ್ಮಯ್ಯನ ಪ್ರಸಂಗವನ್ನು ಆಡಿ ಅಲ್ಲ ಹಾಡಿ ತೋರಿಸೋಣ

ಅಂಗವಂತರ ಬೀದಿ ಲಿಂಗವಂತರ ಬೀದಿ
ಜಂಗಮರ ಬೀದಿಗಳು ಸಾಲುಸಾಲಿನಲಿ
ಸಾಲು ಸಾಲಿನಲಿ
ದಿಕ್ ತಳಾಂಗು ತಕದಿಮಿತ

ಹೀಗೆ ಬಹು ಸುಂದರವಾಗಿ ಮನಸೂರೆಗೊಳ್ಳುವಂತೆ ಕರಪಾಲದವರು ಹಾಡುತ್ತಾರೆ.

ಚೌಡಿಕೆಯವರು ದಕ್ಷಿಣ ಕರ್ನಾಟಕದ ವೃತ್ತಿಗಾಯಕರಲ್ಲಿ ಒಬ್ಬರು. ಇವರು ಎಲ್ಲಮ್ಮನ ಪರಮಭಕ್ತರು. ಎಲ್ಲಮ್ಮ ದೇವಿಯನ್ನು ಕುರಿತ ಸುದೀರ್ಘ ಪುರಾಣ ಕಾವ್ಯವನ್ನು ಹಾಡುತ್ತಾರೆ. ಅವರು ಬಳಸುವುದು ಚರ್ಮವಾದ್ಯ ಚೌಡಿಕೆ. ಅದನ್ನು ನುಡಿಸುತ್ತಾ, ಹಾಡುತ್ತಾ, ನರ್ತಿಸುತ್ತಾ ಅತ್ಯಂತ ಆಕರ್ಷಿಣಿಯವಾಗಿ ಹಾಡುತ್ತಾರೆ.

ಎಲ್ಲಮ್ಮನೆಂಬೊಳು ಎಲ್ಲರಿಗೂ ದೊಡ್ಡೋಳು
ದಿರುಳಿರಾಯಾನ ಮಗಳೆ ಎಲ್ಲಮ್ಮ
ಕರುಣೆ ಕಣ್ಣ ತೆರೆಯೇ ॥ಸೊಲ್ಲು॥
ಪರಶುರಾಮನ ತಾಯಿ ಪರಮಕಲ್ಯಾಣಿ ನೀನು
ಪರಶುರಾಮಯ್ಯ ಪಡೆದಾಳು ಮಾತ ॥ಕರುಣೆ॥

ಎಂಬ ಎಲ್ಲಮ್ಮನನ್ನು ಕುರಿತ ಗೀತೆ ಅತ್ಯಂತ ಜನಪ್ರಿಯವಾದುದು ದೇವರ ಗುಡ್ಡರು ಕರ್ನಾಟಕದ ಜನಪದ ವೃತ್ತಿಗಾಯಕರಲ್ಲಿ ಸುಪ್ರಸಿದ್ಧರು. ಕಂಸಾಳೆ ಎಂಬ ವಿಶಿಷ್ಟ ತಾಳವನ್ನು ನುಡಿಸುತ್ತಾ ಹಾಡುತ್ತಾರಾದ್ದರಿಂದ ಇವರನ್ನು ಕಂಸಾಳೆಯವರೆಂದು ಕರೆಯುತ್ತಾರೆ.

ದೇವರ ಗುಡ್ಡರು ಹಾಡುವ ಜನಪದ ಮಹಾಕಾವ್ಯ "ಮಲೆಯ ಮಹದೇಶ್ವರ" ಅತ್ಯಂತ ಜನಪ್ರಿಯ ಮಹಾಕಾವ್ಯ. ಇದನ್ನು ಡಾ.ಪಿ.ಕೆ.ರಾಜಶೇಖರ ಅವರು ಸಂಗ್ರಹಿಸಿದ್ದಾರೆ. ಇದು ಜನಪದದ ಮೊದಲ ಮಹಾಕಾವ್ಯ. ಇದನ್ನು ಜಗತ್ತಿಗೆ ನೀಡಿದ ಮಹಾನ್ ಸಂಗ್ರಹಕಾರರು, ಗಾಯಕರು, ಪ್ರಾಧ್ಯಾಪಕರು ಮತ್ತು ಮಹಾನ್ ಮಾನವತಾವಾದಿಯೂ ಆಗಿದ್ದಾರೆ. ಡಾ.ಪಿ.ಕೆ.ರಾಜಶೇಖರ ಅವರು ಅವರಿಗೆ ಜನಪದ ಜೋಗಿ ಎಂಬ ಬಿರುದು ಸಹ ಇದೆ. ದೇವರು ಗುಡ್ಡರು ಹಾಡುವ ಮಲೆಯ ಮಾದೇಶ್ವರ ಕಾವ್ಯದ ಸತ್ಯಶರಣೆಸಂಕಮ್ಮ ಈ ಭಾಗದಿಂದ ಕೆಲವು ಸಾಲುಗಳು.

ಕೋಲುಮಂಡೆ ಜಂಗಮದೇವರು
ಕೋರಣ್ಯಕೆ ದಯ ಮಾಡವರೆ
ಕೋರಣ್ಯ ನೀಡಮ್ಮ ಕೊಡುಗಲ್ಲಯ್ಯಾಗೆ ॥ಸೊಲ್ಲು॥
ಹರನಿಗೆ ಸರಣಂದೆ ಅಯ್ಯ
ಗುರುವಿಗೆ ಸರಣಂದೆ
ಹರಹರ ಶಿವಶಿವ ಸಂಕಾರ ನಮ್ಮ
ಮಾದೇವ್ಗೆ ಸರಣಂದೆ ॥ನಡೆಸೊಲ್ಲು॥
ಕುಲದಲ್ಲಿ ಗುರು ಬೊಕ್ಕಲುಗೌಡ
ಜಾತಿಲಿ ಸೋಲುಗ ನೀಲಯ್ಯ
ನೀಲಯ್ಯ ಮಡದಿ ಸಂಕಮ್ಮ
ಮೂಲೋಕದಲ್ಲೇ ಕರಚಲುವೆ
ಮಡ್ಡಿ ಸಂಕಮ್ಮನ ಬಳಿಗೆ ಬತ್ತಾವ್ನೆ
ದೇವ ಸೋಲುಗ ನೀಲಯ್ಯ ॥ಕೋರಣ್ಯ॥

ಹೀಗೆ ನೀಲಯ್ಯ ಸಂಕಮ್ಮರ ನಡುವೆ ನಡೆಯುವ ಸಂಭಾಷಣೆ ಮಾತುಕತೆ ನೀಲಯ್ಯ ನೀಡುವ ಹಿಂಸೆ ಅದನ್ನೆಲ್ಲ ಸಹಿಸುವ ಸಂಕಮ್ಮ ಕೊನೆಗೆ ಮಲೆಯ ಮಾದೇಶ್ವರನ ಕೃಪೆಗೆ ಒಳಗಾಗುವ ಈ ಭಾಗ ಅತ್ಯಂತ ಕರುಣಾಜನಕವಾದ ಸುಂದರ ಭಾಗವಾಗಿದೆ.

ದೊಂಬಿದಾಸರು ಜನಪದ ವೃತ್ತಿಗಾಯಕರು. ಇವರ ಮನೆಮಾತು ತೆಲುಗು ಭಾಷೆಯಾದರು ಅವರು ಹಾಡುವ ಹಾಡುಗಳು ಕಾವ್ಯಗಳು ಕನ್ನಡದಲ್ಲಿ ಏಕತಾರಿಯನ್ನು ಹಿಡಿದು ಹಾಡುತ್ತಾ ತುಮಕೂರು, ಮಂಡ್ಯ, ಹಾಸನ, ಮೈಸೂರು ಜಿಲ್ಲೆಗಳ ಎಲ್ಲೆಡೆಯೂ ಕಾಣಸಿಗುತ್ತಿದ್ದರು. ಇತ್ತೀಚೆಗೆ ಕಾಣುವುದು ವಿರಳ. ಗಂಗೆ–ಗೌರಿ ಜಗಳ ಇವರು ಹಾಡುವ ಅತ್ಯಂತ ಜನಪ್ರಿಯ ಕಾವ್ಯಭಾಗ.

ತಂದನ್ನೊ ತಾನೋ ತಂದನ್ನೊ ತಾ
ನಂದನ್ನೊ ತಾನೊ ತಂದನ್ನೊ
ಮಲ್ಲಿಗೆ ಹೂಗಾಗಿ ಮಾತಾದ್ರೆ ಬೆಳೆಯೀತು
ಜಾಜೀಯ ಹೂಗಾಗಿ ಜಗಳಾವೆ ಹತ್ತಿತ್ತು
ಗಂಗೇಗೂ ಗೌರಿಗೂ ಹತ್ತೀತು ಕಾಳಾಗ
ಅವ್ರು ಜಡೆಮುಡಿ ಹಿಡಿದು ಜಗಳವಾಡಿದರು.

ಹೀಗೆ ಗಂಗೆ ಗೌರಿ ಜಗಳವನ್ನು ಸರಾಗವಾಗಿ ಹಾಡುವ ದೊಂಬಿದಾಸರು ಬೈಗುಳವನ್ನು ಸಹಜವಾಗಿಯೇ ಬಳಸುತ್ತಾರೆ.

ನೀಲಗಾರರು ಎಂದು ಕರೆಸಿಕೊಳ್ಳುವ ಜನಪದ ಕಲಾವಿದರು ಮಂಟೆಸ್ವಾಮಿ, ರಾಚಪ್ಪಾಜಿ ಮತ್ತು ಸಿದ್ದಪ್ಪಾಜಿಯವರ ಹೆಸರಿನಲ್ಲಿ

ದೀಕ್ಷೆ ಪಡೆದು ತಂಬೂರಿ ಹಿಡಿದು ಧರೆಗೆ ದೊಡ್ಡವರ ಕಾವ್ಯವನ್ನು ಹಾಡುವ ಧಾರ್ಮಿಕ ವೃತ್ತಿಗಾಯಕರು ಮೈಸೂರು, ಮಂಡ್ಯ, ಬೆಂಗಳೂರು, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಇವರು ಮಂಟೇಸ್ವಾಮಿ ಮಹಾಕಾವ್ಯವನ್ನು ಪ್ರಧಾನವಾಗಿ ಹಾಡುತ್ತಾರೆ. ನೀಲಗಾರರು ಜನಪದ ಮಹಾಭಾರತದಿಂದ ಆಯ್ದ ಅರ್ಜುನ ಜೋಗಿ ಹಾಡನ್ನು ಸುಂದರವಾಗಿ ಹಾಡುತ್ತಾರೆ.

ಹರಹರಹರನೆ ಜಯತೋ ಹರಮೂರು
ಪುರವಗೆದ್ದವನೆ ಜಯತೋ
ಕರುಣಾಸಾಗರ ಜಯತೋ ಉರಗಭೂಷಣ ಜಯತೋ
ಗರಳ ಪುರಿವಾಸ ಜಯತೋ ॥ಸೊಲ್ಲು॥
ಹಸಿದಾದ ಹುಲಿಯ ಚರ್ಮ ನನ್ನರ ನಿಮಗೆ
ವಿಷಕಂಠ ರುಂಡಮಾಲೆ
ಹಸನಾದ ಜೋಗಯ್ಯ ಹೊಸದಾಗಿ ಬಂದವುನೆ
ಹೆಸರ ಕೇಳುವ ಬನ್ನಿರೇ

ಹೀಗೆ ಜನಪದ ವೃತ್ತಿಗಾಯಕರು ಮತ್ತು ಜನಪದ ಹಾಡುಗಳು ಪ್ರಸ್ತುತ ಸಮಾಜಕ್ಕೆ ಅಗತ್ಯ ಅನಿವಾರ್ಯ. ಇದು ಜನರಿಗೆ ಬದುಕುವ ರೀತಿ–ನೀತಿ, ಪ್ರೀತಿ, ವಾತ್ಸಲ್ಯ, ಪರಸ್ಪರ ಸ್ನೇಹ, ವಿಶ್ವಾಸ ನೈತಿಕ ಗುಣಗಳನ್ನು ಕಲಿಸಿಕೊಡುತ್ತದೆ. ಜೀವನ ಮೌಲ್ಯಗಳು ಮರೆಯಾಗುತ್ತಿರುವ ಇಂದಿನ ಪೀಳಿಗೆಗೆ ಮೌಲ್ಯಗಳನ್ನು ತಿಳಿಸಿಕೊಡುವ ಈ ಜನಪದ ಮೂಲಧಾಟಿ ಹಾಡುಗಳು ಅಗತ್ಯ. ಅನಿವಾರ್ಯ ಎಂಬುದು ನನ್ನ ಅಭಿಪ್ರಾಯ.

**ಗ್ರಂಥಋಣ**


1. ಬಾರಯ್ಯ ಬೆಳದಿಂಗಳೆ – ಡಾ.ಪಿ.ಕೆ.ರಾಜಶೇಖರ
2. ಜಾನಪದ ಜೋಗಿ – ಡಾ.ಪಿ.ಕೆ.ರಾಜಶೇಖರ ಅವರ ಅಭಿನಂದನಾ ಗ್ರಂಥ
3. ಕನ್ನಡ ಸಾಹಿತ್ಯ ಕೋಶ – ರಾಜಪ್ಪ ದಳವಾಯಿ
4. ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ.ಮುಗಳಿ
5. ಕೋಗಿಲಾಗಿ ಕೂಗುತೀಯಲ್ಲೋ – ಹೊನ್ನಾರು ಜನಪದ ಗಾಯಕರು (ಸಂಗ್ರಹ)